ಶ್ರೀ ಎಸ್. ಆರ್. ಬೊಮ್ಮಾಯಿ.—ಸಭೆ ಸೇರುವುದಕ್ಕೆ ೨ ಗಂಟೆ ಮುಂಚಿತವಾಗಿ ಪ್ರಶ್ನೋತ್ತರಗಳನ್ನು ಕೊಡಬೇಕು ಎಂದು ತಾವು ನಿನ್ನೆ ಆಪ್ಪಣೆ ಕೊಡಿಸಿದ್ದೀರಿ; ಆ ರೀತಿ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ವಿಧಾನ ಪರಿಷತ್ತಿನಲ್ಲಿ ಹಿಂದಿನದಿವಸವೇ ಕೊಡುತ್ತಾರೆ.

ಅಧ್ಯಕ್ಷರು.—ಅಲ್ಲಿ ರೂಲ್ಸ್ ಏನಿದೆಯೋ ಏನೋ ನನಗೆ ಗೊತ್ತಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊದಲೇ ಸಾರ್ವಜನಿಕರಿಗೆ ಗೊತ್ತಾಗಬಾರದು ಎನ್ನುವ ಆರ್ಥದಲ್ಲಿ ತಾವು ಹೇಳಿದಿರಿ. ವಿಧಾನಪರಿಷತ್ತಿನಲ್ಲಿ ಹಿಂದಿನದಿವಸವೇ ಕೊಡುತ್ತಾರೆ.

MR. SPEAKER.—Unless the rule is amended I have to honour the existing rule and cannot change it.

ಶ್ರೀ ಸಿ. ಎಂ. ಇಬ್ರಾಹಿಂ.—ನಾನು ರೂಲ್ಸ್ ಪ್ರಕಾರವೇ ಕೇಳುತ್ತಿದ್ದೇನೆ. ಸಭೆ ಸೇರುವುದಕ್ಕೆ ೨ ಗಂಟೆ ಮುಂಚಿತವಾಗಿ ಪ್ರಶ್ನೋತ್ತರಗಳನ್ನು ಕೊಡಬೇಕು.

MR. SPEAKER.—That will be done.

A member occupying the C.M.S Seat (Contd)

(ಮಾನ್ಯ ಭೀಮಣ್ಣ ಖಂಡ್ರೆಯವರು ಮಾತನಾಡುವುದಕ್ಕೆ ಪ್ರಾರಂಭಮಾಡಿದರು) * * *

ಅಧ್ಯಕ್ಷರು.—ಅವರು ಹೇಳುವುದು ಏನನ್ನೂ ರಿಕಾರ್ಡ್ ಮಾಡಬೇಡಿ. I want the hon. member to respect the rules and conventions. ಪ್ರಶ್ನೋತ್ತರಗಳಾದ ಮೇಲೆ ಈ ಪ್ರಶ್ನೆಯನ್ನು ತಾವು ಕೇಳಬಹುದು. ಮತ್ತು ಇದನ್ನು ಹೇಳುವುದಕ್ಕೆ ನೋಟೀಸ್ ಕೊಡಬೇಕು ಇದು ಬಹಳ ಚಿಕ್ಕವಿಷಯ.

ಶ್ರೀ ಭೀಮಣ್ಣ ಖಂಡ್ರೆ.—ಅಧ್ಯಕ್ಷರೆ ನನಗೆ ಇಳಿದುಕೊಳ್ಳಲು ಕೊಟ್ಟಿರುವ ಮನೆ ಸರಿಯಿಲ್ಲ.

MR. SPEAKER.—If you misbehave further, you will be in trouble. This is question hour. After question hour you can raise this matter.

ಶ್ರೀ ಎಚ್. ಡಿ. ದೇವೇಗೌಡ.—ಸಭೆಯಲ್ಲಿ ಸದಸ್ಯರು ಮಿಸ್‌ಬಿಹೇವ್ ಮಾಡಬಾರದು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾಗೆಯೇ ಸದಸ್ಯರನ್ನು ನೋಡಿಕೊಳ್ಳುವುದು ಮತ್ತು ಸದಸ್ಯರನ್ನು ಟ್ರೀಟ್ ಮಾಡತಕ್ಕಂಥಾದ್ದರ ಬಗ್ಗೆ ಆವರಿಗೂ ಆಷ್ಟೆ ತೀವ್ರತೆ ಇರಬೇಕು. They should not be treated as slaves. When a Member comes to the city to attend the session, he must be provided with the accommodation. But the Member has not been provided with the accommodation. So, it is the fault of your Secretary. You must take care of your Secretariat whatever it might be your contention and the member cannot be thrown out in the street.

MR. SPEAKER.—Both are accommodated side by side. ಇಬ್ಬರಿಗೂ ರೂಮುಗಳನ್ನು ಪಕ್ಕಪಕ್ಕದಲ್ಲೇ ಕೊಟ್ಟಿದ್ದೇವೆ. ಒಂದೇ ರೂಮನ್ನು ಇಬ್ಬರೂ ಬೇಕು ಎಂದು ಕೇಳುತ್ತಾರೆ, ಏನು ಮಾಡೋಣ?

---

* * * matter not recorded as ordered by the Chair.

SRI B. BASAVALINGAPPA.—Mr. Speaker, Sir, I am bringing the following to the notice of the House. Rules 308 & 309 reads as follows :

308. "The Speaker may direct any member whose conduct is, in his opinion grossly disorderly to withdraw immediately from the Assembly, and any member so ordered to withdraw shall do so forthwith and shall absent himself during the remainder of the day's sitting.

309. (1) The Speaker may, if he deems it necessary, name a member who disergards the authority of the Chair or abuses the rules of the Assembly by persistently and willfully obstructing the business thereof.

(2) If a member is so named by the Speaker, he shall forthwith put the question that the member (naming him) be suspended from the service of the Assembly during the remainder of the session (or such part there of as the Speaker may specify).

Now, it is the right of the Speaker and also the right of the Member to move the motion for naming. Sir, apart from what has transpired now and also the grievances of Mr. Bhimanna Khandre. I understand his grievances and he must be accomodated and also respected, I do not know why and how he has been put into this trouble I wholeheartedly support the grievances he has expressed that he should be accomodated properly. This is my stand. But, as regards the manner in which he has conducted himself in going to the seat of the Chief Minister and sitting on the chair is wholly against the propriety of any member of this House. If a member of the House can go and occupy the seat of the Hon'ble Minister or can get into the Chambers of the Minister or the Chief Minister...I think such an event has not taken place so far anywhere in this Country. If a member were to misbehave in such a fashion... .....

SRI GOVINDA P. WODEYARAJ.—Sir, I am on a point of order on these reasons. The matter is closed. The Hon'ble Minister has not quoted the rules for moving the motion under Rules 308 and 309 when Mr. Bhimanna Khandre had occupied the seat of the Chief Minister. The Hon'ble Minister has failed to move the motion when the Hon'ble Member occupied the seat of the Chief Minister. Now he is no more occupying the seat of the Chief Minister. It was at your instance and at the instance of the Opposition Leader he has come and occupied his seat.

MR. SPEAKER.—What is the point of order?

SRI GOVIND P. VADEYARAJ.—The hon'ble Member Sri Bhimanna Khandre was not occupying the seat of the Chief Minister when the Hon'ble Minister Sri Basavalingappa was moving the motion under rules 308 and 309. The matter is already over. He has come and occupied his seat at your direction and he now wants to ventilate his grievances from his seat. If the rules do not permit him to do so now, you are perfectly right in directing him to ventilate his grievances at the appropriate time *i e.*, after the question hour. So, the matter ends there. He has agreed to it and he has obeyed your order When he is in his proper seat, how can the members on the other side or the Hon'ble Minister take objection to it ?

MR. SPEAKER.—Now he is in his seat. Before that where was he ?

SRI GOVIND P. VADEYARAJ.—It was then open to the Minister to move that motion.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ಮಾನ್ಯ ಕಂದಾಯ ಸಚಿವರು ಏನು ಕ್ರಿಯಾಲೋಪವನ್ನು ಎತ್ತಿದ್ದಾರೆ ಅದಕ್ಕೆ ತಮ್ಮ ರೂಲಿಂಗನ್ನು ಕೊಡುವುದಕ್ಕಿಂತ ಮುಂಚೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಲೆಜಿಸ್ಲೇಚರ್ ಸೆಕ್ರಟರಿಯೇಟ್‌ಗೆ ಇನ್ನೂ ಸ್ವಾತಂತ್ರ್ಯವಿಲ್ಲ. ಅದು ಇನ್ನೂ ಕಾರ್ಯಾಂಗದ ಹಿಡಿತದಲ್ಲಿಯೇ ಇದೆ. ತಾವು ಏನೊಂದು ಆದೇಶ ಕೊಟ್ಟರೂ ಸದಸ್ಯರಿಗೆ ಎಲ್ಲಾ ಸೌಲಭ್ಯ ಕೊಡಬೇಕೆಂದು ಪ್ರಾಮಾಣಿಕವಾಗಿ ಪ್ರಯತ್ನ ನಡೆಸಿದರೂ ಕೂಡ ಇವತ್ತು ಸರ್ಕಾರವರ ಮರ್ಜಿಯಲ್ಲಿಯೇ ತಾವು ಸಹ ಕೆಲಸ ಮಾಡಬೇಕಾಗಿದೆ. ಒಬ್ಬ ಸದಸ್ಯರಿಗೆ ಏನು ಅಗೌರವವಾಗಿದೆ ಅವರಿಗೆ ಅನಾನುಕೂಲವಾಗಿದೆ, ಆ ರೀತಿ ಅವರಿಗೆ ಆದಂಥ ನೋವನ್ನು ಸಭೆಯ ಗಮನಕ್ಕೆ ತರುವ ಕಾಲದಲ್ಲಿ, ಕಾರ್ಯಾಂಗದವರು ಏನು ತಪ್ಪು ಮಾಡಿದ್ದಾರೆ, ಎನ್ನುವುದನ್ನು ತೀಪ್ರತೆಯಿಂದ ವ್ಯಕ್ತಪಡಿಸುವುದಕ್ಕಾಗಿ ಅವರು ಆಗಲೇ ಅಲ್ಲಿ ಹೋಗಿ ಕುಳಿತ್ತಿದ್ದರು ಅಷ್ಟೇ. ಯಾವುದೇ ಸ್ಥಾನ ಮುಖ್ಯವಲ್ಲ, ಇಲ್ಲಿ ಒಂದು ಆಸನಗಳ ಬಗ್ಗೆ ಹೇಳುವುದಾದರೆ ತಮ್ಮ ಸ್ಥಾನವೇನಿದೆ (ಸಭಾಪತಿಗಳವರ ಸ್ಥಾನವನ್ನುದ್ದೇಶಿಸಿ) ಅದು ಬಹಳ ಮುಖ್ಯವಾದ ಸ್ಥಾನ. ಆ ಸ್ಥಾನಕ್ಕೆ ಎಲ್ಲರೂ ಗೌರವ ಕೊಡಬೇಕು, ಮುಖ್ಯಮಂತ್ರಿಗಳವರ ಸ್ಥಾನವಾಗಲೀ, ವಿರೋಧಪಕ್ಷದ ನಾಯಕರ ಸ್ಥಾನವಾಗಲೀ ಅಷ್ಟು ಮುಖ್ಯವಲ್ಲ. ಇದೆಲ್ಲದ್ದಕ್ಕಿಂತ ತಮ್ಮ ಸ್ಥಾನ ಬಹಳ ಮುಖ್ಯವಾದದ್ದು. ಆ ಸ್ಥಾನದ ಒಂದು ಗೌರವ ಮರ್ಯಾದೆಯನ್ನು ಮತ್ತು ಪಾವಿತ್ರ್ಯವನ್ನು ಕಾಪಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ತಪ್ಪುಗೊಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ, ಹಿಂದೆ ಶ್ರೀ ಅಜೀಜ್‌ಸೇಠ್‌ರವರೂ ಸದಸ್ಯರಾಗಿದ್ದಾಗ ಮಂತ್ರಿಗಳ ಸ್ಥಾನದಲ್ಲಿ ಹೋಗಿ ಕುಳಿತಿದರು, ಹಿಂದೆ ಅವರು ಹಾಕಿದ್ದ ಸತ್ ಸಂಪದ್ರಾಯವನ್ನು ಒಂದು ಸಾರಿ ಪುರುಕಳಿಸಿ ಜಾಗ್ರತಿಪಿಸಿಕೊಳ್ಳಬೇಕಾಗಿದೆ. ಹಾಗೆ ನಡೆದುಕೊಂಡು ಬಂದಿದೆ, ಆದುದರಿಂದ ತಾವು ಸದಸ್ಯರಿಗೆ ಕೊಡಬೇಕಾದ ಸೌಲತ್ತುಗಳನ್ನು ಕೊಡಿಸಲು ಪ್ರಯತ್ನ ಮಾಡಿ, ಅದನ್ನು ಕೊಡಿಸದಿದ್ದಾಗ ಅವರು ಈ ರೀತಿಯಾಗಿ ತಮ್ಮ ತೀವ್ರತೆಯನ್ನು ವ್ಯಕ್ತಪಡಿಸುತ್ತಾರೆ. ಆದುದರಿಂದ ಆ ರೀತಿ ಆಗದೇ ಇರುವ ಹಾಗೆ ವ್ಯವಸ್ಥೆ ಮಾಡಿ ಇದು ಇನ್ನು ಹೆಚ್ಚು ದೂರ ಬೆಳೆದುಕೊಂಡು ಹೋಗುವುದು ಬೇಡ, ಈ ಪ್ರಕರಣವನ್ನು ಇಲ್ಲಿಗೆ ಮುಕ್ತಾಯ ಮಾಡಿ.

ಅಧ್ಯಕ್ಷರು.—೪೦೬, ೪೦೭ನೇ ನಂಬರ್ ರೂಂ ಬೇಕು ಅಂತ ಜಗಳ ನಡೆಯುತ್ತಿದೆ.

ಶ್ರೀ ಸಿ.ಎಂ. ಇಬ್ರಾಹಿಂ.—ಅವರು ಬಟ್ಟೆ ಬರೆಗಳನ್ನು ಇಟ್ಟಿದ್ದಂಥ ರೂಂನ್ನೇ ಬೇರೆಯವರಿಗೆ ಏತಕ್ಕೆ ಕೊಡಬೇಕಾಗಿತ್ತು ? ಆ ರೀತಿ ಕೊಡಲು ಅವರಿಗೇನು ಅಧಿಕಾರವಿದೆ ?

SRI B. BASAVALINGAPPA.—Sir, I am happy that my friend Sri Vadeyaraj has raised this point when he was sitting in the seat of the Chief Minister I have raised it. When such occasion arise, should

Government sit quiet as a silent spectator ? I do not think this House will agree with any member can sit anywhere. Here is an instance where a member of the Assembly because he was not treated properly in the matter of allotment of room in the Legislators' Home he goes and sits in the seat of the Chief Minister. This is a funny thing. This is not only an act which should be condemmed but also an act of disorderly behaviour by a member of the House. I have moved when he was sitting in the seat of the Chief Minister that he should be named. I request the Chair to give a ruling on this unless the member express regret for what he has done.

ಶ್ರೀ ಎಸ್.ಆರ್. ಬೊಮ್ಮಾಯಿ.—ತಾವು ಈ ವಿಚಾರ ಇಲ್ಲಿಗೇ ಮುಗಿಯಿತು ಎಂದು ಹೇಳಿದ್ದರಿಂದ ನಾನು ಮಾತನಾಡದೇ ಸುಮ್ಮನೆ ಕುಳಿತಿದ್ದೆ. ಮಾನ್ಯ ಸದಸ್ಯರು ಯಾವ ರೀತಿಯಾಗಿ ನಡೆದುಕೊಳ್ಳಬೇಕು. ಸಭಾಪತಿಗಳವರು ಯಾವ ರೀತಿಯಾಗಿ ನಡೆದುಕೊಳ್ಳಬೇಕು ಮತ್ತು ಸರ್ಕಾರ ಯಾವ ರೀತಿಯಾಗಿ ನಡೆದುಕೊಳ್ಳಬೇಕು ಎನ್ನುವ ಬಗ್ಗೆ ನಿಯಮಗಳು ಇವೆ. ಸಂಪ್ರದಾಯ ಇದೆ. ನಿನ್ನೆಯ ದಿವಸ ಮಾನ್ಯ ಸಭಾಪತಿಯವರು ಹೇಳಿದರು ಇಲ್ಲಿ ನಡೆಯುವುದನ್ನು ಗ್ಯಾಲರಿಯಲ್ಲಿರುವ ಜನರು ನೋಡುತ್ತಾರೆ ಪತ್ರಿಕೆಗಳವರು ಇರುವುದರಿಂದ ಅವರು ಪತ್ರಿಕೆಗಳಲ್ಲಿ ಪ್ರಚಾರ ಮಾಡುತ್ತಾರೆ ಇದರಿಂದ ಎಲ್ಲಾ ಸಾರ್ವಜನಿಕರಿಗೂ ಗೊತ್ತಾಗುತ್ತದೆಂದು, ಆದರಿಂದ ಬಹಳ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು ಎಂದು ನಾನುಅದನ್ನು ಒಪ್ಪುತ್ತೇನೆ. ಶ್ರೀ ಭೀಮಣ್ಣ ಖಂಡ್ರೆಯವರು ಆ ಸ್ಥಾನದಲ್ಲಿ ಕುಳಿತಿದ್ದು ಏತಕ್ಕೆ? ಅದು ಸರಿ ಎಂದು ನಾನು ಸಮರ್ಥನೆ ಮಾಡುತ್ತಿಲ್ಲ. ಅವರು ತಮ್ಮ ಭಾವನೆಯ ತೀವ್ರತೆಯನ್ನು ವ್ಯಕ್ತ ಮಾಡುವ ಉದ್ದೇಶದಿಂದ ಅಲ್ಲಿ ಹೋಗಿ ಕುಳಿತಿದ್ದರು ಅಷ್ಟೇ ! ಆ ಮೇಲೆ ತಮ್ಮ ಮಾತಿನಂತೆ ಇಲ್ಲಿ ತಮ್ಮ ಸ್ಥಾನಕ್ಕೆ ಬಂದು ಕುಳಿತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ. – ಕುಳಿತಿದ್ದು ಸರಿಯೋ ತಪ್ಪೋ ಅಂತ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದೊಂದು ಸಾರಿ ನಾವು ಹೇಳುವುದು, ನಮ್ಮ ಭಾಷೆ ಸರ್ಕಾರಕ್ಕೆ ಅರ್ಥವಾಗುವುದಿಲ್ಲ. ನಮ್ಮ ಭಾಷೆ ಅರ್ಥವಾಗದಿದ್ದಾಗ ಈ ತರಹದ ಒಂದು ತೀವ್ರವಾದ ಕ್ರಮವನ್ನು ತೆಗೆದುಕೊಂಡು ತಿಳಿಸಬೇಕಾಗುತ್ತದೆ. ಮಾನ್ಯ ಬಸವಲಿಂಗಪ್ಪನವರಿಗೆ ಹೇಳುತ್ತಿದ್ದೇನೆ. ನಾವು ಬಹಳ ನಮ್ರವಾಗಿ ಹೇಳಿದರೆ ಅದು ನಮ್ಮ ವೀಕ್‌ನೆಸ್ ಎಂದು ತಾವು ತಿಳಿದುಕೊಳ್ಳಬಾರದು. ಆ ರೀತಿ ತಿಳಿದುಕೊಂಡರೆ ಆಗಲೇ ಸದಸ್ಯರುಗಳು ಸಫರ್ ಆಗುವುದು. ಮುಖ್ಯಮಂತ್ರಿಗಳವರ ಸ್ಥಾನದಲ್ಲಿ ಹೋಗಿ ಕುಳಿತಿದ್ದದ್ದು ಸರಿಯಲ್ಲ. ಆದರೆ ಅದಕ್ಕಾಗಿ ವಿಷಾದ ವ್ಯಕ್ತಪಡಿಸಬೇಕಾದ ಪ್ರಮೇಯವೇನೂ ಇಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ಹಾವಿತ್ಯವನ್ನು ಉಳಿಸಿಕೊಳ್ಳಬೇಕು. ಯಾರೂ ಲಘುವಾಗಿ ತೆಗೆದುಕೊಳ್ಳಬಾರದು. ಅದನ್ನು ಒಪ್ಪಿಕೊಳ್ಳುತ್ತೇನೆ, ಮುಖ್ಯಮಂತ್ರಿಗಳವರಿಗೂ ಮರ್ಯಾದೆ ಇರಬೇಕು, ಸದಸ್ಯರಿಗೂ ಮರ್ಯಾದೆ ಇರಬೇಕು. ಅವರು ಅಲಕ್ಷ್ಯ ಮನೋಭಾವನೆಯಿಂದ ನಡೆದುಕೊಂಡಿರುವುದರಿಂದ ಅವರು ವಿಷಾದ ವ್ಯಕ್ತ ಮಾಡಿದರೆ ಇವರು ವಿಷಾದ ವ್ಯಕ್ತ ಮಾಡಬಹುದು.

ಶ್ರೀ ಬಿ. ಬಸವಲಿಂಗಪ್ಪ. —ನನಗೂ ಇದಕ್ಕೂ ಸಂಬಂಧವಿಲ್ಲ.

MR. SPEAKER.—For having occupied the seat of the Chief Minister the hon'ble Member must regret first.

1-30 P.M.

SRI BHEEMANNA KHANDRE.—No regret.

ಶ್ರೀ ಎಸ್. ಆರ್. ಬೊಮ್ಮಾಯಿ. —ಸರ್ಕಾರದವರು ವಿಷಾದ ವ್ಯಕ್ತ ಮಾಡಿದರೆ ಮಾನ್ಯ ಸದಸ್ಯರು ವಿಷಾದ ವ್ಯಕ್ತ ಮಾಡುತ್ತಾರೆ.

MR. SPEAKER.—I Will look into the matter.

SRI BHEEMANNA KHANDRE.—If the Hon'ble Speaker regret I will also regret. That is my answer. ಮಾನ್ಯ ದೇವೆಗೌಡರು ಏನು ಹೇಳಿದ್ದಾರೆ ಆದನ್ನು ನಾನು ಒಪ್ಪುತ್ತೇನೆ. ಆದರೆ ಕರ್ನಾಟಕ ವಿಧಾನಮಂಡಲದ ಕಾರ್ಯಾಲಯದ ಕಾರ್ಯದರ್ಶಿಯವರು ಹಾಗೂ ಸಿಬ್ಬಂದಿಯವರು ನನ್ನನ್ನು ಪೀಪನ್‌ನನ್ನು ಟ್ರೀಟ್ ಮಾಡಿದ ಹಾಗೆ ಟ್ರೀಟ್ ಮಾಡಿದ್ದಾರೆ. ಆದ್ದರಿಂದ ನಾನು ವಿಷಾದ ವ್ಯಕ್ತ ಮಾಡುವುದಿಲ್ಲ. That is my charge. It has been deliberately done by the Legislature Secretary. Let your Secretary express regret then I will say 'regret'.

SRI K. BHASKAR NAIDU.—He cannot insult the Chair.

(Interruptions)

MR. SPEAKER.—Don't record.

* * * * * * * *

I have been watching from the very beginning.

SRI K. BHASKAR NAIDU.—Should the Chair express regret to any member?

ಶ್ರೀ ಎಚ್. ಡಿ. ದೇವೆಗೌಡ,—ಮಾನ್ಯ ಭೀಮಣ್ಣ ಖಂಡ್ರೆಯವರು ಅಧ್ಯಕ್ಷರು ವಿಷಾದ ವ್ಯಕ್ತ ಮಾಡಿದರೆ ನಾನು ವಿಷಾದ ವ್ಯಕ್ತ ಮಾಡುತ್ತೇನೆಂದು ಹೇಳಿದ್ದಾರೆ, ಅದು ಯೋಗ್ಯವಾದುದಲ್ಲ. ಆದು ಅಧ್ಯಕ್ಷರಲ್ಲಿ ಆಗೌರವ ತೋರಿಸುವುದಾದರೆ ಅದನ್ನು ಸೈರಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಮಾನ್ಯ ಭೀಮಣ್ಣ ಖಂಡ್ರೆಯವರನ್ನು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. So far as sitting on the seat of the Chief Minister is concerned, that is a different issue. If the hon'ble members were to stand firm on that, we will also be firm. But, so far as asking the Chair to regret is concerned, it is not correct. I appeal to the hon'ble member to withdraw that word and regret for it. That is all my request.

SRI BHEEMANNA KHANDRE.—I am regreting for that.

SRI C. M. ARUMUGAM (K.G.F.).—Sir, I have a submission to make to this House. I have a lot of respect for the Leader of the Opposition and Leader of the House. There are certain senior members of this House, and certain new members have come. The Chair may be thinking why I have been keeping quiet. I am also a turbulent member for the last three consecutive Assemblies I am keeping quiet because I must have respect for the Leader of the Opposition. When he rises, we must have self-imposed restriction not to stand up. That has been the tradition. Some new members have come and create some problems. When they create some problem, the Leader of the Opposition should clarify it. Otherwise what happens is, when the Leader of the Opposition talks other members go on speaking. As Sri H.D.

---

* * * word/words not recorded as orderd by the chair.

Devegowda put it the members cannot rub with the Speaker. After all the Speaker represents the whole House. Due to such interruptions I have been seeing that you ask the Reporters not to record. This problem can be solved if the Leader of the Opposition takes up the matter with you. When he represents anything, we must bind ourseles with whatever he says. If that is not done and everybody were to rise and speak you direct the Reporters not to record. It happened twice yesterday. We have come here to represent. When we represent we must follow certain procedures. Of course regarding my friend occuping the Chair, I leave it to the Leader of the Opposition and to the House. Now I am only submitting how in procedural matters. we must conduct ourselves here. If you can kindly guide the new Members it will be good. I am not saying that new members do not know procedure. They know. But they require some practice. If the Leader of the Opposition wants to speak first preference must be given to him. If the Opposition Leader is not able to present matter then other members can be allowed.

SRI P. RAMADEV.—There should not be any discrimination between old members and new members. There are rules here. We have to go by the rules.

MR. SPEAKER.—I am calling for Sri Bhimanna Khandre for tea and the new member from Sirsi, and Opposition Leader just to hear their grievances. One is accommodated in Room No. 406 and the other in room No. 407. We could have discussed that matter. He has misrepresented to this House. This is the situation. I am trying to pacify the member. Let him have some patience.

SRI P. RAMADEV.—My only request is, we should not be discriminated.

SRI C. M. ARUMUGAM.—When we elect an hon'ble member as Leader we must respect him. That is all my submission. Another submission I wish to make is, any personal inconvenience to members is a matter purely between the member and the Speaker. If the inconveniences of the members were to be raised in this House it will look very small. That is my submission. Supposing a room is not given, the member can approach the Speaker. But this is not the form to raise it because we must remember that three crores of people in Karnataka are facing lack of accommodation. We belong to the people and we cannot command any special conveience or treatment. But if the members have anything to represent in this connection he has a right to approach the Speaker and not raise such issues in this House. That is all my suggestion.

SRI BHEEMANNA KHANDRE.—It is not a question of inconvenience or convenience. It is a question of principle.

MR. SPEAKER.—Unless I call the members, they should not speak

SR B. BASAVALINGAPPA.—Sir, the point remains unsettled.

SRI GOVINDA P. WODEYARAJ.—Sir, the Hon'ble Minister is disobeying the ruling of the Chair.

SRI B. BASAVALINGAPPA.—Sir, this matter cannot be closed ; we have got to discuss it.

MR. SPEAKER.—Let us take up Questions.

Reconsidering the ruling on withholding consent to an Adjournment motion

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ. ತಾವು ಒಂದು ವಿಚಾರವನ್ನು ಅಪ್ಪಣೆ ಕೊಡಿಸಿದ್ದೀರಿ.....

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರೇ, ಆ ವಿಷಯ ಈಗ ತೆಗೆದುಕೊಳ್ಳುವುದು ಬೇಡ. ಪ್ರಶ್ನೋತ್ತರ ವೇಳೆ ಆದಮೇಲೆ ಕೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆಮೇಲೆ ನಾನು ಕೇಳುವುದಿಲ್ಲ.

ಅಧ್ಯಕ್ಷರು.—ವಿರೋಧಪಕ್ಷದ ನಾಯಕರು ಈ ರೀತಿಯು ಮಾರ್ಗಕ್ಕೆ ಹೋಗುವುದು ವಿಷಾದಕರ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿನ್ನೆ ಈ ಮನೆಯಲ್ಲಿ ನಡೆದಂಥ ಘಟನೆಯು ಬಗ್ಗೆ ನಾನೂ ಹೇಳಬೇಕಾಗುತ್ತದೆ. ಈ ಸಭೆಯ ನಿಯಮಗಳ ರೀತಿ ನಡೆದುಕೊಳ್ಳಬೇಕಾದುದು ನಮ್ಮ ಕರ್ತವ್ಯ ಆದೇರೀತಿ ನಮ್ಮ ಹಕ್ಕುಗಳನ್ನು ರಕ್ಷಣೆ ಮಾಡತಕ್ಕಂಥಾದ್ದು ನಿಮ್ಮ ಕರ್ತವ್ಯ. ಈಗ ನನ್ನ ಮಾತು ಇಷ್ಟೆ.....

ಅಧ್ಯಕ್ಷರು.—ತಾವು ಹೀಗೆ ಎದ್ದು ನಿಂತುಕೊಂಡು ಮಾತನಾಡುವುದಾದರೆ ನಾನು ಚರ್ಚೆಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಇದಕ್ಕೆ ಅವಕಾಶ ಕೊಡದಿದ್ದರೆ ನಾವು ಮುಂದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ.

ಅಧ್ಯಕ್ಷರು.—ತಾವು ಪ್ರಶ್ನೋತ್ತರ ವೇಳೆ ಆಗಲಿ ಎಂದು ಹೇಳಿದ್ದೀರಿ ; ಮತೆ ಅದೇ ವಿಚಾರವನ್ನು ಹೇಳುತ್ತಿದ್ದೀರಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಈ ಸಭೆಯ ಘನತೆ-ಗೌರವಗಳಿಗೆ ಧಕ್ಕೆ ಬರತಕ್ಕಂಥ ಪ್ರಸಂಗಗಳು ಇಲ್ಲಿ ಆಗಿರುವುದರಿಂದ ಆ ವಿಷಯದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿನ್ನೆಯ ದಿವಸ ನಾನು ಒಂದು ನಿಲುವಳಿ ಸೂಚನೆಯನ್ನು ತಂದಿದ್ದೆ. ನಾವು ಇನ್ನೂ ಅನೇಕ ಜನ ಸದಸ್ಯರು ಮಾತನಾಡುವವರು ಇದ್ದೆವು. ಅದಕೆ ಅವಧಿ ಬೇಕು ಎಂದು ಕೇಳಿಕೊಳ್ಳುತ್ತಿದ್ದೆವು.

ಅಧ್ಯಕ್ಷರು.—ತಾವು ಈಗ ಏನು ಹೇಳುತ್ತಿದ್ದೀರಿ ಆ ವಿಷಯವನ್ನು ಆಮೇಲೆ ಮಾತನಾಡೋಣ ಎಂದು ಹೇಳಿದ್ದೇನೆ. ಮೊದಲು ಪ್ರಶ್ನೋತ್ತರ ವೇಳೆ ಆಗಲಿ, ಆಮೇಲೆ ಅದನ್ನು ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನನ್ನದು ಒಂದು ಕ್ರಿಯೋಲೋಪ; ಕೆಲವು ವರ್ಷಗಳಿಂದ ನಾನೂ ಕೂಡ ಈ ಸದನದ ಸದಸ್ಯನಾಗಿದ್ದೇನೆ. ಈ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿದ್ದೇನೆ. ತಾವು ಈ ಪ್ರಶ್ನೋತ್ತರ ವೇಳೆಗೆ ಮುಂಚೆ ಚರ್ಚೆಗೆ ಅವಕಾಶ ಮಾಡಿಕೊಡುತ್ತಿದ್ದೀರಿ.